ಈ ಲೇಖನದ ವಿಷಯಾನುಕ್ರಮಣಿಕೆ


ಅಯ್ಯಪ್ಪನನ್ನು ನಾವು ಏಕೆ ಪೂಜಿಸುವದಿಲ್ಲ? 2

ಅಯ್ಯಪ್ಪನ ಉಲ್ಲೇಖ ವೇದ-ಪುರಾಣಗಳಲ್ಲಿಲ್ಲ 3

ಅಯ್ಯಪ್ಪನ ಪೂಜಾಕ್ರಮ ಶಾಸ್ತ್ರಕ್ಕೆ ವಿರುದ್ಧ 4

ಅಯ್ಯಪ್ಪನ ಜನನ ಶಾಸ್ತ್ರದಲ್ಲಿ ಹೇಳಲ್ಪಟ್ಟಿಲ್ಲ 5

# ವಿಶ್ವನಂದಿನಿ ಪ್ರಶ್ನೋತ್ತರಮಾಲೆ – 76

## ಅಯ್ಯಪ್ಪನನ್ನು ನಾವು ಏಕೆ ಪೂಜಿಸುವದಿಲ್ಲ?

ಆಚಾರ್ಯರೇ, ಮಾಧ್ವರು ಏಕೆ ಅಯ್ಯಪ್ಪನ ಪೂಜೆಯನ್ನು ಮಾಡುವದಿಲ್ಲ ಮತ್ತು ಶಬರಿಮಲೈ ಯಾತ್ರೆಯನ್ನು ಮಾಡುವದಿಲ್ಲ. ದಯವಿಟ್ಟು ತಿಳಿಸಿ.

– ಪ್ರಸಾದ್ ಕೆ. ಎನ್.

## ಅಯ್ಯಪ್ಪನ ಉಲ್ಲೇಖ ವೇದ-ಪುರಾಣಗಳಲ್ಲಿಲ್ಲ

ಮಾಧ್ವರಷ್ಟೇ ಅಲ್ಲ, ಅಯ್ಯಂಗಾರರು ಸ್ಮಾರ್ತರು ಮುಂತಾದ ಸಾಂಪ್ರದಾಯಿಕ ಬ್ರಾಹ್ಮಣರೂ ಸಹ ಅಯ್ಯಪ್ಪನ ಪೂಜೆಯನ್ನು ಮಾಡುವದಿಲ್ಲ

ಕಾರಣ, ಯಾವುದೇ ದೇವತೆಯನ್ನು ನಾವು ಪೂಜಿಸಬೇಕಾದರೆ ಆ ದೇವತೆ ವೇದಗಳಿಂದ ಪ್ರತಿಪಾದ್ಯನಾಗಿರಬೇಕು ಮತ್ತು ಅಧಿಕೃತ ಪುರಾಣಗಳಲ್ಲಿ ಅದರ ಉಲ್ಲೇಖವಿರಬೇಕು.

ವೇದಗಳಲ್ಲಿ ಹಾಗೂ ಅಧಿಕೃತ ಪುರಾಣಗಳಲ್ಲಿ ಅಯ್ಯಪ್ಪನ ಉಲ್ಲೇಖವೂ ಇಲ್ಲ. ಪೂಜಾವಿಧಾನವೂ ಇಲ್ಲ.

ಯಾವುದೇ ಕಾರ್ಯವನ್ನು ಮಾಡಬೇಕಾದರೂ ಶಾಸ್ತ್ರದ ಪ್ರಮಾಣವನ್ನು ಪಡೆದೇ ಮಾಡಬೇಕು ಎಂದು ಭಗವದ್ಗೀತೆಯ ಶಾಸನವಿದೆ — **ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯವ್ಯವಸ್ಥಿತೌ** ಎಂದು.

## ಅಯ್ಯಪ್ಪನ ಪೂಜಾಕ್ರಮ ಶಾಸ್ತ್ರಕ್ಕೆ ವಿರುದ್ಧ

ಕೆಂಪು ಮತ್ತು ಕಪ್ಪುಬಟ್ಟೆಯನ್ನುಟ್ಟು ಪೂಜೆ ಮಾಡುವದು ಶಾಸ್ತ್ರದಲ್ಲಿ ನಿಷೇಧಗೊಂಡ ಸಂಗತಿ.

ಸಂನ್ಯಾಸಿಗಳು ಸಹ ಕಾವಿಬಟ್ಟೆಯನ್ನುಡಬೇಕು. ಕೆಂಪಲ್ಲ. ಇವತ್ತಿಗೆ ಕೆಂಪು ಮತ್ತು ಕಾವಿಯ ಮಧ್ಯದಲ್ಲಿ ಅಂತರವೇ ಇಲ್ಲದಂತಹ ಬಟ್ಟೆಯನ್ನುಟ್ಟು ಪೂಜೆ ಮಾಡುತ್ತಾರೆ. ಅದೂ ಸಹ ತಪ್ಪೇ.

**"ರಕ್ತಕೌಪೀನವಸ್ತ್ರತಾ"**, ಮತ್ತು **"ನೀಲವಸ್ತ್ರೈಃ ಪೂಜಾ"** ಎಂದು ವರಾಹಪುರಾಣದಲ್ಲಿ ಕೆಂಪು ಮತ್ತು ಕಪ್ಪು ಬಟ್ಟೆಯನ್ನುಟ್ಟು ಪೂಜೆ ಮಾಡುವದು ಅಪರಾಧ ಎಂದು ಪರಿಗಣಿತವಾಗಿದೆ.

ಅಯ್ಯಪ್ಪನ ಪೂಜೆಯಲ್ಲಿ ಕೆಂಪು ಮತ್ತು ಕಪ್ಪು ಬಟ್ಟೆಗಳೇ ವಿಹಿತವಾಗಿದೆ. ವರಾಹರೂಪ ಭಗವಂತನ ವಚನಕ್ಕೆ ವಿರುದ್ಧವಾದ ರೀತಿಯಲ್ಲಿ ಪೂಜಾವಿಧಾನ ಇರುವದರಿಂದ ನಾವು ಪೂಜೆಯನ್ನು ಮಾಡುವದಿಲ್ಲ.

## ಅಯ್ಯಪ್ಪನ ಜನನ ಶಾಸ್ತ್ರದಲ್ಲಿ ಹೇಳಲ್ಪಟ್ಟಿಲ್ಲ

ಹರಿಹರರ ಸಂಯೋಗದಿಂದ ಅಯ್ಯಪ್ಪ ಹುಟ್ಟಿದ ಎನ್ನುವ ಕಥೆಯನ್ನು ಹೇಳುತ್ತಾರೆ.

ಪರಮಾತ್ಮನ ಮೋಹಿನೀರೂಪದ ದರ್ಶನದಿಂದ ರುದ್ರದೇವರು ವಿಚಲಿತರಾದದ್ದು ಸತ್ಯ. ಆದರೆ ಮೋಹನೀ-ಶಂಕರರ ಮಧ್ಯದಲ್ಲಿ ಸಂಭೋಗ ನಡೆಯಲಿಲ್ಲ.

ಮೋಹಿನೀ ಶಂಕರರ ಕಥೆಗಳನ್ನು ದಾಖಲಿಸುವ ಭಾಗವತ ಮುಂತಾದ ಅಧಿಕೃತ ಗ್ರಂಥಗಳಲ್ಲಿ ಇದರ ಉಲ್ಲೇಖವಿಲ್ಲ.

ಹೀಗಾಗಿ ನಾವು ಅಯ್ಯಪ್ಪನ ಪೂಜೆಯನ್ನು ಮಾಡುವದಿಲ್ಲ.

— ವಿಷ್ಣುದಾಸ ನಾಗೇಂದ್ರಾಚಾರ್ಯ